# ಶ್ರೀಮಾತೆಯವರ ನೆನಪುಗಳು

ಮೂಲ ಬಂಗಾಳಿ : **ರಸನ್ ಆಲಿ ಖಾನ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

(ಜಯರಾಮಬಾಟಿಗೆ ಸಮೀಪದಲ್ಲಿರುವ ಶಿರೋಮಣಿಪುರ ಗ್ರಾಮದ ನಿವಾಸಿ ರಸನ್ ಆಲಿ ಖಾನ್ ಅವರಿಂದ ಈ ನೆನಪುಗಳನ್ನು ಸಂಗ್ರಹಿಸಿದವರು ಅಧ್ಯಾಪಕರಾದ ತಡಿತ್‌ಕುಮಾರ್ ಬಂದ್ಯೋಪಾಧ್ಯಾಯ ಅವರು – ೧೯೬೩ರ ಮೇ ೧೪ರಲ್ಲಿ. ಆಗ ರಸನ್ ಆಲಿ ಖಾನ್ ಅವರಿಗೆ ೯೧ ವರ್ಷ ವಯಸ್ಸಾಗಿತ್ತು. – *ಸಂ.* )



**ನಾ**ನು ಶ್ರೀಮಾತೆಯವರನ್ನು ಭೇಟಿಯಾದಾಗ ನನಗೆ ೧೩-೧೪ ವರ್ಷ ವಯಸ್ಸಾಗಿತ್ತು. ಮಫೇತಿ ಶೇಖ್ ಹಾಗೂ ಹಮೇದಿ ಶೇಖ್ ಅವರು ನನ್ನನ್ನು ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಗೆ ಕರೆದುಕೊಂಡು ಹೋಗಿದ್ದರು. ನನ್ನ ಚಿಕ್ಕಪ್ಪನಿಗೆ ಅವರ ಪರಿಚಯವಿತ್ತು. ನಮ್ಮ ಮನೆಯಿದ್ದುದು ಶಿಹೋರಿನ ಪಕ್ಕದಲ್ಲಿದ್ದ ಶಿರೋಮಣಿಪುರ; ಅವರಿಬ್ಬರ ಮನೆ ಶಿರೋಮಣಿಪುರಕ್ಕೆ ಪಕ್ಕದಲ್ಲಿದ್ದ ಪರಮಾನಂದಪುರ. ಶಿರೋಮಣಿಪುರ ಹಾಗೂ ಪರಮಾನಂದಪುರದ ಅನೇಕ ಮಂದಿ ಸ್ತ್ರೀ-ಪುರುಷರೊಂದಿಗೆ ಶ್ರೀಮಾತೆಯವರಿಗೆ ಆತ್ಮೀಯ ಸಂಬಂಧವಿತ್ತು. ಶಿರೋಮಣಿಪುರದ ಅಮ್‌ಜಾದ್, ಅವರ ಪತ್ನಿ ಮತಿಜಾನ್ ಬೀಬಿ ಹಾಗೂ ಅವರ ತಾಯಿ ಫತೀಮಾ ಬೀಬಿ ಅವರ ಮೇಲೆ ಶ್ರೀಮಾತೆಯವರಿಗೆ ವಿಶೇಷ ಪ್ರೀತಿಯಿತ್ತು. ಶ್ರೀಮಾತೆಯವರೇ ಒಂದು ರೀತಿಯಲ್ಲಿ ಅವರ ಸಂಸಾರವನ್ನು ನಡೆಸುತ್ತಿದ್ದರು ಎನ್ನಬೇಕು. ಅಮ್‌ಜಾದ್ ಹೆಚ್ಚಾಗಿ ಗ್ರಾಮದಲ್ಲಿ ಇರುತ್ತಿರಲಿಲ್ಲ. ಆಗ ಮನೆಯಲ್ಲಿ ವಸ್ತುಗಳಿಗೆ ಅಭಾವ-ಕೊರತೆ ಉಂಟಾದರೆ, ಅಮ್‌ಜಾದ್ ಅವರ ತಾಯಿ ಅಥವಾ ಪತ್ನಿ ಶ್ರೀಮಾತೆಯವರ ಮನೆಗೆ ಹೋಗಿಬಿಡುತ್ತಿದ್ದರು. ಶ್ರೀಮಾತೆಯವರು ಅವರಿಗೆ ಹೊಟ್ಟೆ ತುಂಬಾ ಬೆಲ್ಲ , ಕಡಲೆಪುರಿ ತಿನ್ನಿಸುತ್ತಿದ್ದರು; ಅದರೊಂದಿಗೆ ತಲೆಗೆ ಹಚ್ಚಲು ಎಣ್ಣೆ, ಅಕ್ಕಿ, ಬಟ್ಟೆಬರೆ, ಇತರ ಸಾಮಗ್ರಿಗಳು - ಇನ್ನೂ ಏನೇನೋ ಕೊಟ್ಟು ಕಳುಹಿಸುತ್ತಿದ್ದರು. ಆಗ ಶಿರೋಮಣಿಪುರ ಹಾಗೂ ಪರಮಾನಂದಪುರಗಳಲ್ಲಿ ರೇಷ್ಮೆ ವ್ಯವಸಾಯ ನಡೆಯುತ್ತಿತ್ತು. ಬ್ರಿಟಿಷರು ಜಮೀನ್ದಾರರುಗಳ ಮೂಲಕ ಸಾಲಕೊಟ್ಟು, ಕೃಷಿಕರು ರೇಷ್ಮೆ ಕೃಷಿ ಮಾಡದಂತೆ ತಡೆಯುತ್ತಿದ್ದರು. ಭೂಮಿಯಲ್ಲಿ ಬೇರೆ ಬೆಳೆಗಳನ್ನು ಬೆಳೆಯುವುದಕ್ಕೂ ಅವರಿಗೆ ಅವಕಾಶ ಸಿಗುತ್ತಿರಲಿಲ್ಲ. ಜಮೀನ್ದಾರರುಗಳ ಹಾಗೂ ಬ್ರಿಟಿಷರ ಭಯದಿಂದ ಈ ಎರಡೂ ಗ್ರಾಮದ ಜನರು ಬದುಕಬೇಕಿತ್ತು. ಈ ಎರಡೂ ಹಳ್ಳಿಗಳಲ್ಲಿ ಮುಸಲ್ಮಾನರ ಸಂಖ್ಯೆ ಅಧಿಕವಾಗಿತ್ತು. ಕೃಷಿ ಕೆಲಸ ಸರಿಯಾಗಿ ನಡೆಯದ ಕಾರಣ, ಅವರಿಗೆ ಆರ್ಥಿಕ ಅಭಾವವುಂಟಾಗಿತ್ತು. ಸಿಹೋರ್, ಜಿಬಟಾ, ಜಯರಾಮಬಾಟಿ, ಫುಲೂಯಿ, ಶ್ಯಾಮಬಜಾರ್ ಈ ಸೀಮೆಯ ಶ್ರೀಮಂತರಿಗಾಗಲೀ, ಮಧ್ಯಮ ವರ್ಗದವರಿಗಾಗಲೀ - ಈ ಮುಸಲ್ಮಾನರ ದುಃಖದುಮ್ಮಾನಗಳು ಯಾರ ಗಮನಕ್ಕೂ ಬಂದಿರಲಿಲ್ಲ. ಕೇವಲ ಶ್ರೀಮಾತೆ ಮಾತ್ರವೇ ನಮ್ಮ ಕಷ್ಟಗಳಿಗೆ ಸಹಾನುಭೂತಿ ತೋರಿಸುತ್ತಿದ್ದರು. ಜಾತಿ, ಧರ್ಮಗಳ ಭೇದವನ್ನು ಎಣಿಸದೆ, ಅವರು ನಮ್ಮನ್ನು ತಮ್ಮ ಮಡಿಲಿಗೆಳೆದುಕೊಂಡರು.

ಹಮೇದಿ ಶೇಖ್, ಮಫೇತಿ ಶೇಖ್, ರಂಜಾನ್ ಪಠಾಣ್ ಇವರು ಎತ್ತಿನ ಗಾಡಿಯ ವ್ಯವಸ್ಥೆ ಮಾಡುತ್ತಿದ್ದರು. ಯಾತ್ರಿಕರನ್ನು ಎತ್ತಿನ ಗಾಡಿಗಳಲ್ಲಿ ಅವರು ವಿಷ್ಣುಪುರದವರೆಗೆ ಕರೆದುಕೊಂಡು ಹೋಗುತ್ತಿದ್ದರು. ಅವರು ಅನೇಕ ಬಾರಿ ಶ್ರೀಮಾತೆಯವರನ್ನು ಹಾಗೂ ತಮ್ಮಂದಿರ ಮಕ್ಕಳನ್ನು ಕೋಯಲ್‌ಪಾರಾದಿಂದ ಜಯರಾಮಬಾಟಿಗೋ, ಜಯರಾಮಬಾಟಿಯಿಂದ ಕೋಯಲ್‌ಪಾರಾಗೋ ಕರೆದುಕೊಂಡು ಹೋಗುತ್ತಿದ್ದುದನ್ನು ನಾನು ಕಂಡಿದ್ದೇನೆ. ಕಲ್ಕತ್ತೆಗೆ ಹೋಗುವಾಗ ಕೆಲವೊಮ್ಮೆ ಜಯರಾಮಬಾಟಿಯಿಂದ ವಿಷ್ಣುಪುರದ ತನಕವೂ ಕರೆದುಕೊಂಡು ಹೋದದ್ದಿದೆ. ಎತ್ತಿನ ಗಾಡಿಗಳನ್ನು ಓಡಿಸುವವರೊಂದಿಗೆ, ಪ್ರಯಾಣ ಮಾಡುವಾಗಲಲ್ಲದೆ, ಶ್ರೀಮಾತೆಯವರು ನಿಯಮಿತ

ವಾಗಿ ಕೂಡ ಭೇಟಿಯಾಗುತ್ತಿದ್ದರು. ಶ್ರೀಮಾತೆಯವರ ಹೊಸ ಮನೆಯ ನಿರ್ಮಾಣವಾದಾಗ, ಮಣ್ಣಿನ ಗೋಡೆಯನ್ನು ಮಾಡುವುದರಲ್ಲಿ ಶಿರೋಮಣಿಪುರ ಹಾಗೂ ಪರಮಾನಂದ ಪುರದ ಕೆಲಸದವರು ಹೆಚ್ಚು ದುಡಿದಿದ್ದರು. ಸಿಹೋರ್ ಬಳಿ ಶ್ರೀಮಾತೆಯವರ ತಮ್ಮಂದಿರ ಕೆಲವು ಜಮೀನಿನಲ್ಲಿ ಮಫೇತಿ ಶೇಖ್ ಕೃಷಿ ಕೆಲಸ ಮಾಡುತ್ತಿದ್ದ. ಹಮೇದಿ ಶೇಖನ ಪತ್ನಿ ನಫಿ ಜಾನ್ ಬೀಬಿ ಹಾಗೂ ಮಫೇತಿ ಶೇಖನ ಪತ್ನಿ ಮಜಿರನ್ ಬೀಬಿ ಯವರೊಂದಿಗೂ ಶ್ರೀಮಾತೆಯವರು ಆತ್ಮೀಯ ಸಂಪರ್ಕ ಹೊಂದಿದ್ದರು. ಅವರು ನಡುನಡುವೆ ಶ್ರೀಮಾತೆಯವರ ಮನೆಗೆ ಹೋಗುತ್ತಿದ್ದರು. ಶ್ರೀಮಾತೆಯವರು ಅವರನ್ನು 'ಬೀಬಿ ಸೊಸೆ' ಎಂದು ಕರೆಯುತ್ತಿದ್ದರು. ಅವರಿಗೆ ಹೊಟ್ಟೆತುಂಬಾ ತಿನ್ನಿಸಿ, ಕಷ್ಟ ಸುಖ ವಿಚಾರಿಸುತ್ತಿದ್ದರು.

ಶ್ರೀಮಾತೆಯವರ ಹೊಸ ಮನೆ ನಿರ್ಮಾಣವಾದಾಗ ಶರತ್ ಮಹಾರಾಜ್ ಜಯರಾಮಬಾಟಿಗೆ ಬಂದರು.[೧] ಆಗ ಅವರು ಶಿರೋಮಣಿಪುರ ಹಾಗೂ ಪರಮಾನಂದಪುರಕ್ಕೂ ಬಂದಿದ್ದರು. ನಾನು ಅವರನ್ನು ಕಂಡಿದ್ದೆ. ವಿಶೇಷವಾಗಿ ಶ್ರೀಮಾತೆಯವರ ಹೊಸ ಮನೆಯ ಕಾರಣದಿಂದಲೇ ಶಿರೋಮಣಿಪುರ ಹಾಗೂ ಪರಮಾನಂದಪುರದ ಜನರಿಗೆ ಶ್ರೀಮಾತೆಯವರೊಂದಿಗೆ ಆತ್ಮೀಯ ಸಂಬಂಧವುಂಟಾಗಲು ಅವಕಾಶವುಂಟಾಗಿತ್ತು. ಆಗ ಆ ಪ್ರದೇಶದ ಹಿಂದೂಗಳಲ್ಲಿ ಜಾತಿ ನೀತಿ ಇತ್ಯಾದಿಗಳಿಗೆ ಸಂಬಂಧಿ ಸಿದಂತೆ ತುಂಬಾ ಸೂಕ್ಷ್ಮ ಭಾವನೆಗಳಿದ್ದವು. ಹಿಂದೂಗಳು ಮುಸ ಲ್ಮಾನರನ್ನು ಮನೆಯೊಳಕ್ಕೆ ಸೇರಿಸುತ್ತಿರಲಿಲ್ಲ. ಶ್ರೀಮಾತೆಯವರ ಹೊಸ ಮನೆಯ ನಿರ್ಮಾಣಕ್ಕಾಗಿ ಮುಸಲ್ಮಾನ ಕೆಲಸಗಾರರಿಂದ ಕೆಲಸ ಮಾಡಿಸಿದ್ದಕ್ಕಾಗಿ ಜಯರಾಮಬಾಟಿಯ ಸಂಪ್ರದಾಯಸ್ಥ ಬ್ರಾಹ್ಮಣರು ಏನೇನೋ ಆಡಿಕೊಳ್ಳುತ್ತಿದ್ದರು. ಅವರು ಶ್ರೀಮಾತೆ ಯವರನ್ನು 'ಮ್ಲೇಚ್ಛ'ರೆಂದು ಕರೆಯುವುದಕ್ಕೂ ಹಿಂಜರಿಯ ಲಿಲ್ಲ. ಶ್ರೀಮಾತೆಯವರ ಆತ್ಮೀಯರೂ ಕೂಡ ಅವರ ಮನೆ ನಿರ್ಮಾಣದ ಕಾರ್ಯದಲ್ಲಿ ನಮ್ಮನ್ನು ಸೇರಿಸಿಕೊಳ್ಳಲು ನಿರಾ ಕರಿಸಿದ್ದರು. ಜನರ ಮುಂದೆ ಶ್ರೀಮಾತೆಯವರು ತಲೆಯ ಮೇಲೆ ಸೆರಗೆಳೆದುಕೊಂಡಲ್ಲದೆ ಹೋಗುತ್ತಿರಲಿಲ್ಲ. ತುಂಬ ನಿಧಾನ ವಾಗಿ, ಮೃದುವಾಗಿ ಮಾತನಾಡುತ್ತಿದ್ದರು. ಆದರೆ ಎಲ್ಲಾದರೂ ಅನ್ಯಾಯವುಂಟಾದರೆ, ಅದಕ್ಕೆ ವಿರುದ್ಧವಾಗಿ ನಿರ್ಭೀತರಾಗಿ ಖಂಡಿಸುತ್ತಿದ್ದರು.

ಈ ವಿಷಯದಲ್ಲಿ ಅವರು ಎಂದಿಗೂ ರಾಜಿ ಮಾಡಿಕೊಳ್ಳು ತ್ತಿರಲಿಲ್ಲ. ಹಳ್ಳಿಯ ಕೆಲಸಗಾರರ ಒತ್ತಾಯದಿಂದಾಗಿ ಶ್ರೀಮಾತೆ ಯವರ ಮನೆ ನಿರ್ಮಾಣದ ಕೆಲಸ ಒಂದೆರಡು ದಿನ ನಿಂತಿತ್ತು. ಅನಂತರ ಕೇಳಿದೆ, ಕೇವಲ ನಮ್ಮ ಮೂಲಕವೇ ಕೆಲಸ ಮಾಡಿಸ ಬೇಕೆಂದು ಶ್ರೀಮಾತೆ ಹೇಳಿದ್ದರು ಎಂಬುದಾಗಿ. ಕೊನೆಯ ವರೆಗೂ ಶ್ರೀಮಾತೆಯವರ ಹಠ, ಸಂಕಲ್ಪಕ್ಕೆ ಮಣಿದು ಹಳ್ಳಿಯ ಸಂಪ್ರದಾಯಸ್ಥರು ಅದಕ್ಕೆ ಒಪ್ಪಬೇಕಾಯಿತು. ಇದರ ನಂತರ ನಾವು ಶ್ರೀಮಾತೆಯವರ ಮನೆಗೆ ಹೆಚ್ಚು ಹೆಚ್ಚು ಹೋಗಿಬರ ಲಾರಂಭಿಸಿದೆವು.

ಆಗ ಜಯರಾಮಬಾಟಿಯಲ್ಲಿ ಏನೂ ಸಿಗುತ್ತಿರಲಿಲ್ಲ. ದೊಡ್ಡ ಮಾರುಕಟ್ಟೆಯೆಂದರೆ ಬದನಗಂಜ್ ಅಥವಾ ಕೋತುಲ್‌ಪುರ್ ಆಗಿತ್ತು. ಶಿರೋಮಣಿಪುರದಲ್ಲಿ ಒಂದು ಸಣ್ಣ ಮಾರುಕಟ್ಟೆ ಇತ್ತು. ಹಳ್ಳಿಯ ಎಲ್ಲ ಮನೆಗಳಲ್ಲೂ ಒಂದಿಷ್ಟು ತರಕಾರಿ ಬೆಳೆಯು ತ್ತಿದ್ದರು. ಮಫೇತಿ ಚಿಕ್ಕಪ್ಪ ತಮ್ಮ ತರಕಾರಿ ಹೊಲದಿಂದ ಹೆಚ್ಚಾಗಿ ಸೋರೆಕಾಯಿ, ಕುಂಬಳಕಾಯಿ, ನುಗ್ಗೆಕಾಯಿ, ಸುವರ್ಣಗಡ್ಡೆ ಇತ್ಯಾದಿ ತರಕಾರಿಗಳನ್ನು ಶ್ರೀಮಾತೆಯವರ ಮನೆಗೆ ತೆಗೆದು ಕೊಂಡು ಹೋಗುತ್ತಿದ್ದರು. ಅವರಿಂದ ನಾನು ಒಂದು ಘಟನೆ ಯನ್ನು ಕೇಳಿದ್ದೇನೆ. ಅವರು ಹೇಳುತ್ತಿದ್ದರು: ''ಶ್ರೀಮಾತೆ ಯವರು ಮನುಷ್ಯರಲ್ಲ. ಅವರು ದೊಡ್ಡ ಪೀರ್– ದರ್ವೇಶ ರಂತೆ (ಮುಸಲ್ಮಾನ ಸಂತರು). ಒಂದು ಸಲ ನಾನು ಸೋರೆ ಕಾಯಿ ತೆಗೆದುಕೊಂಡು ಶ್ರೀಮಾತೆಯವರ ಮನೆಗೆ ಹೋಗಿದ್ದೆ. ಅಲ್ಲಿಗೆ ತಲುಪಿದಾಗ, ಶ್ರೀಮಾತೆಯವರು ಹೊಸ ಮನೆಯಲ್ಲಿ ಪೂಜೆ ಮಾಡುತ್ತಿದ್ದರು. ನಾನು ಅವರ ಮನೆಗೆ ಆಗಾಗ ಹೋಗಿ ಬಂದು ಮಾಡುತ್ತಿದ್ದೆ; ಹಾಗಾಗಿ ನನಗೆ ಅಲ್ಲಿ ಯಾವುದೇ ಸಂಕೋಚ, ಹಿಂಜರಿಕೆಯಿರಲಿಲ್ಲ. ನಾನು ಹೋಗಿ ಅವರನ್ನು ಕರೆದೆ, 'ಅಮ್ಮಾ, ಸೋರೆಕಾಯಿ ತಂದಿದ್ದೇನೆ' ಎಂದು. ನಾನು ಕರೆದದ್ದನ್ನು ಕೇಳಿ ಒಬ್ಬಾಕೆ ಹೆಣ್ಣುಮಗಳು ಹೊರಗೆ ಬಂದು, 'ಸ್ವಲ್ಪ ಕುಳಿತುಕೋ. ಅಮ್ಮ ಪೂಜೆ ಮಾಡುತ್ತಿದ್ದಾರೆ.' ಎಂದಳು. ನಾನು ದೂರದಿಂದಲೇ ನೋಡಿದೆ – ಶ್ರೀಮಾತೆಯವರು ಪೂಜೆ ಮಾಡುವ ಆಸನದಲ್ಲಿ ಕುಳಿತಿದ್ದರು. ನಾನು ಅಂಗಳದ ಒಂದು ಮೂಲೆಯಲ್ಲಿ ಸೋರೆಕಾಯಿ, ಸೋರೆ ಸೊಪ್ಪನ್ನು ಹಿಡಿದು ಕೊಂಡು ನಿಂತಿದ್ದೆ. ಹಠಾತ್ತನೆ ನೋಡಿದೆ, ಶ್ರೀಮಾತೆಯವರು ಪೂಜೆ ಮಾಡುತ್ತಿದ್ದ ಆಸನದ ಕಡೆಗೇ ನಾನು ನೋಡುತ್ತಿದ್ದಂತೆ ಅವರು ಆಸನದಲ್ಲಿ ಕಾಣಿಸಲಿಲ್ಲ ; ಕುಳಿತಿದ್ದ ಅವರ ದೇಹ ಆಸನ ದಿಂದ ಎರಡು ಕೈಯಳತೆಯಷ್ಟು ಮೇಲಕ್ಕೆ ಇದ್ದಂತೆ ಕಾಣಿಸಿತು. ಶ್ರೀಮಾತೆ ಅದೇ ರೀತಿ ಕುಳಿತಿದ್ದಾರೆ. ಆಸನ ಮಾತ್ರ ಕೆಳಗೆ ನೆಲದಲ್ಲಿದೆ! ಶ್ರೀಮಾತೆ ಶೂನ್ಯದಲ್ಲಿ ಕುಳಿತು ಜಪ ಮಾಡು ತ್ತಿದ್ದಾರೆ! ಇದು ಬರೀ ಭ್ರಮೆಯಲ್ಲ ತಾನೆ, ಎಂದು ನಾನು ಮನಸ್ಸಿನಲ್ಲೇ ಯೋಚಿಸಿದೆ. ಕಣ್ಣು ಒರೆಸಿಕೊಂಡು ಮತ್ತೆ ನೋಡಿದೆ

---

೧ ೧೯೧೫ರ ಏಪ್ರಿಲ್ ತಿಂಗಳಿನಲ್ಲಿ ಸ್ವಾಮಿ ಶಾರದಾನಂದರ ಮೇಲ್ವಿಚಾರಣೆ ಯಲ್ಲಿ ಶ್ರೀಮಾತೆಯವರ ಹೊಸ ಮನೆಯ ಕೆಲಸ ಆರಂಭವಾಯಿತು. ಆಗ ಅವರು ಒಂದು ತಿಂಗಳು ಜಯರಾಮಬಾಟಿಯಲ್ಲಿದ್ದರು. ೧೯೧೬ರ ಮೇ ೧೫ರಂದು ಶ್ರೀಮಾತೆಯವರು ಹೊಸ ಮನೆಯನ್ನು ಪ್ರವೇಶಿಸಿದರು. ಜುಲೈ ತಿಂಗಳ ಮೊದಲ ವಾರದಲ್ಲಿ ಶ್ರೀಮಾತೆಯವರನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಲು ಸ್ವಾಮಿ ಶಾರದಾನಂದರು ಜಯರಾಮಬಾಟಿಗೆ ಹೋಗಿದ್ದರು. ಜುಲೈ ೮ರಂದು ಅವರು ಕಲ್ಕತ್ತೆಗೆ ಶ್ರೀಮಾತೆಯವರನ್ನು ಕರೆದುಕೊಂಡು ಹೋದರು.

– ಅದೇ ದೃಶ್ಯ ಕಾಣಿಸಿತು! ನಾನು ಪೆದ್ದನಂತೆ ಬೇಗನೆ ಮಹಾರಾಜರನ್ನು ಕರೆಯಲು ಹೊರಟಿದ್ದೆ, ಅಷ್ಟರಲ್ಲಿ ಆ ರೀತಿ ಮತ್ತೆ ಕಾಣಿಸಲಿಲ್ಲ. ಅನಂತರ ಶ್ರೀಮಾತೆಯವರು ಆಸನದಿಂದ ಎದ್ದು ಬಂದಾಗ, ನಾನು ಅವರಿಗೆ ಪ್ರಣಾಮ ಮಾಡಿದೆ. ಆದರೆ ನನಗೆ ಪ್ರಣಾಮ ಮಾಡುವಾಗ ಬಹಳ ಭಯವುಂಟಾಯಿತು. ನನಗೆ ಕಡಲೆಪುರಿ, ಬೆಲ್ಲ , ತಲೆಗೆ ಹಚ್ಚಲು ಎಣ್ಣೆ ಇವನ್ನು ಕೊಡಲು ಶ್ರೀಮಾತೆಯವರು ಒಬ್ಬಾಕೆ ಮಹಿಳೆಗೆ ಹೇಳಿದರು. ನಾನು ಅದನ್ನೆಲ್ಲ ತೆಗೆದುಕೊಂಡು ಅಲ್ಲಿಂದ ಮರಳಿದೆ. ಶ್ರೀಮಾತೆಯವರ ಬಳಿ (ಆ ವಿಚಿತ್ರ ದೃಶ್ಯದ ಬಗ್ಗೆ) ಏನನ್ನಾದರೂ ಕೇಳಲು ನನಗೆ ಧೈರ್ಯವುಂಟಾಗಲಿಲ್ಲ.''

ಮುಸಲ್ಮಾನ ಪುರುಷರು ಶ್ರೀಮಾತೆಯವರ ಮನೆಗೆ ಹೋಗುತ್ತಿದ್ದ ಹಾಗೆಯೇ, ಮುಸ್ಲಿಂ ಮಹಿಳೆಯರೂ ಹೋಗುತ್ತಿದ್ದರು. ಶಿರೋಮಣಿಪುರದ ಕೆಲವು ಮಂದಿ ಬೀಬಿಗಳು ಹಣ್ಣು, ತರಕಾರಿ ಇವನ್ನು ಮಾರಾಟ ಮಾಡಲು ಜಯರಾಮಬಾಟಿಗೆ ಹೋಗುತ್ತಿದ್ದರು. ಅವರಲ್ಲೊಬ್ಬಳು ಹಿರಿಯಳಾಗಿದ್ದ ಸಬೀನಾ ಬೀಬಿ. ಅವಳು ಹೆಚ್ಚಾಗಿ ಶ್ರೀಮಾತೆಯವರ ಮನೆಗೆ ಹೋಗುತ್ತಿದ್ದಳು. ಮಾವು-ಹಲಸು ಬೆಳೆಯುವ ಕಾಲದಲ್ಲಿ ಆಕೆ ಕೊತುಲ್‌ಪುರದಿಂದ ಅವನ್ನು ಜಯರಾಮಬಾಟಿಗೆ ತಂದು ಮಾರಾಟ ಮಾಡುತ್ತಿದ್ದಳು. ಶ್ರೀಮಾತೆಯವರ ತಾಯಿ ಕೂಡ ಅವಳ ಮೇಲೆ ವಿಶೇಷ ಪ್ರೀತಿಯನ್ನು ಹೊಂದಿದ್ದರು. ಶ್ರೀಮಾತೆಯವರು ಅವಳನ್ನು 'ಖುಡಿ' (ಚಿಕ್ಕಮ್ಮ) ಎಂದು ಕರೆಯುತ್ತಿದ್ದರು.

ಮೊದಲೆಲ್ಲ ಶಿರೋಮಣಿಪುರ-ಶಿಹೋರ್ ಕಡೆ ತುಂಬಾ ಖರ್ಜೂರದ ಮರಗಳಿದ್ದವು. ಆಗ ಜನರು ಖರ್ಜೂರ ಮರದ ತಲೆಯನ್ನು ಕತ್ತರಿಸಿ, ಖರ್ಜೂರದ ರಸವನ್ನು ಒಂದು ಪಾತ್ರೆಯಲ್ಲಿ ಹಿಡಿದಿಡುತ್ತಿದ್ದರು. ಒಬ್ಬಾತ ಶ- ಖಾನ್ ಪ್ರತಿದಿನ ಖರ್ಜೂರದ ಮರದಿಂದ ರಸವನ್ನು ಇಳಿಸುತ್ತಿದ್ದ. ಈ ರಸದಿಂದ ಖರ್ಜೂರದ ಬೆಲ್ಲ ತಯಾರಿಸಲಾಗುತ್ತಿತ್ತು. ಶಾಜಹಾನ್ ಖಾನ್, ಮಜಿರ್ ಖಾನ್, ಸಾದಿಕ್ ಆಲಿ, ರಫಿ ಮಿರ್ಜಾ ಮುಂತಾದವರೆಲ್ಲ ಖರ್ಜೂರದ ರಸದ ವ್ಯವಸಾಯ ಮಾಡುತ್ತಿದ್ದರು. ಕೊತುಲ್‌ಪುರ್, ಬದನಗಂಜ್, ಕಾಮಾರಪುಕುರ ಚಟಿ, ಗೋಘಾಟ್ ಮೊದಲಾದ ಸ್ಥಳಗಳಲ್ಲಿ ಅವುಗಳನ್ನು ಮಾರಾಟ ಮಾಡುತ್ತಿದ್ದರು. ಅನೇಕರು ಅದರಿಂದಲೇ ಜೀವನ ನಿರ್ವಹಣೆ ನಡೆಸುತ್ತಿದ್ದರು. ಖರ್ಜೂರದ ಬೆಲ್ಲ ತಯಾರಿಸುವುದು ಅತ್ಯಂತ ಕಷ್ಟದ ಕೆಲಸ. ನಾವೂ ಖರ್ಜೂರದ ವ್ಯವಸಾಯ ಮಾಡುತ್ತಿದ್ದೆವು. ಹಲವು ಬಾರಿ ನಾನು ಕೂಡ ಖರ್ಜೂರದ ರಸ ಹಾಗೂ ಬೆಲ್ಲವನ್ನು ತೆಗೆದುಕೊಂಡು ಶ್ರೀಮಾತೆಯವರ ಮನೆಗೆ ಹೋಗಿದ್ದೇನೆ. ಶ್ರೀಮಾತೆಯವರು ಖರ್ಜೂರದ ರಸ ಹಾಗೂ ಬೆಲ್ಲವನ್ನು ತುಂಬ ಇಷ್ಟಪಡುತ್ತಿದ್ದರು. ನಾನು ಖರ್ಜೂರದ ಬೆಲ್ಲ ತೆಗೆದುಕೊಂಡು ಹೋಗಿ ಕೊಟ್ಟರೆ, ಶ್ರೀಮಾತೆಯವರು ಹಣ ಕೊಡುತ್ತಿದ್ದರು. 'ದುಡ್ಡು ತೆಗೆದುಕೊಳ್ಳಲಾರೆ' ಎಂದರೆ ಅವರು ಹೇಳುತ್ತಿದ್ದರು, ''ಮಗೂ, ಹಣ ತೆಗೆದುಕೊಳ್ಳಬೇಕು. ಅದು ಶ್ರಮಪಟ್ಟು ದುಡಿದ ವಸ್ತು.'' ಹಣದ ಜೊತೆಗೆ ಶ್ರೀಮಾತೆಯವರು ಬೇಕಾದಷ್ಟು ಪ್ರಸಾದ, ಕಡಲೆಪುರಿ, ಕಡಲೆಪುರಿಉಂಡೆ ಇವನ್ನೂ ಕೊಡುತ್ತಿದ್ದರು.

ಶಿರೋಮಣಿಪುರದ ದೂದು ಫಕೀರ್ ಹಾಗೂ ಸಲೀಂ ಫಕೀರ್ ಕೂಡ ಶ್ರೀಮಾತೆಯವರ ಮನೆಗೆ ಹೋಗುತ್ತಿದ್ದರು. ಸಂಕ್ರಾಂತಿ ಸಮಯದಲ್ಲಿ ಅವರು ಚಾಮರ ಬೀಸುತ್ತ ಭಿಕ್ಷೆ ಬೇಡುತ್ತಿದ್ದರು. ಶ್ರೀಮಾತೆಗೆ ಅವರೆಂದರೆ ಅಕ್ಕರೆ, ಹಾಗೂ ಅವರ ಮೇಲೆ ಭಕ್ತಿ ಹೊಂದಿದ್ದರು. ಶಿರೋಮಣಿಪುರದ ಪೀರ್ ಅವರ ದರ್ಗಾದಲ್ಲಿ ಅವರು ನೈವೇದ್ಯದ ಹರಕೆ ಹೇಳುತ್ತಿದ್ದರು. ಹಮೇದಿ ಚಿಕ್ಕಪ್ಪ ಹಾಗೂ ಮಫೇತಿ ಚಿಕ್ಕಪ್ಪ ಹೇಳುತ್ತಿದ್ದರು– ''ಶ್ರೀಮಾತೆಯವರಿಗೆ ಎಂಥ ಭಕ್ತಿ! ನಮ್ಮ ಹಬ್ಬ, ಉತ್ಸವಗಳಲ್ಲಿ ಅವರು ನೈವೇದ್ಯ ಹರಕೆ ನೀಡುತ್ತಿದ್ದರು; ಬತ್ತಾಸು ಅರ್ಪಿಸುತ್ತಿದ್ದರು.'' ಮಫೇತಿ ಚಿಕ್ಕಪ್ಪ ಶ್ರೀಮಾತೆಯವರಿಗೆ ಕೇಳಿದ್ದರು, ''ಅಮ್ಮಾ, ಮುಸಲ್ಮಾನರ ಹಬ್ಬದಲ್ಲಿ ನೀವು ನೈವೇದ್ಯ, ಬತ್ತಾಸು ಇವನ್ನು ಏಕೆ ಕಳುಹಿಸುತ್ತೀರಿ? ನೀವು ಹಿಂದೂ ಅಲ್ಲವೆ?''

ಶ್ರೀಮಾತೆ ಅದಕ್ಕೆ ಹೀಗೆ ಹೇಳುತ್ತಿದ್ದರು: ''ಮಗೂ, ಠಾಕೂರರು ಬೇರೆ ಆಗಿದ್ದರೆ? ಎಲ್ಲವೂ ಒಂದೇ. ನಿಮಗೆ ಗೊತ್ತೆ, ಠಾಕೂರರು ಮುಸಲ್ಮಾನ ಧರ್ಮದ ಸಾಧನೆಯನ್ನೂ ಮಾಡಿದ್ದರು. ಆಗ ಅವರು ಮುಸ್ಲಿಮರಂತೆ ನಮಾಜ್ ಮಾಡುತ್ತಿದ್ದರು. ಎಲ್ಲವೂ ಒಂದೇ, ಹೆಸರು ಮಾತ್ರ ಬೇರೆ ಬೇರೆ.'' ಮಫೇತಿ ಚಿಕ್ಕಪ್ಪ ಹಾಗೂ ನಮ್ಮೆಲ್ಲರ ಮೇಲೆ ಶ್ರೀಮಾತೆಯವರಿಗೆ ಎಷ್ಟು ವಿಶ್ವಾಸವಿತ್ತೋ, ಅಷ್ಟೇ ಪ್ರೀತಿಯೂ ಇತ್ತು.

ಬಹಳ ಹಿಂದೆ ಒಮ್ಮೆ ಶ್ರೀಮಾತೆಯವರ ಮಂದಿರದಲ್ಲಿ ಸಿಡಿಲು ಬಿತ್ತು. ಕಿಶೋರಿ ಮಹಾರಾಜ್ (ಸ್ವಾಮಿ ಪರಮೇಶ್ವರಾನಂದರು) ಮಫೇತಿ ಚಿಕ್ಕಪ್ಪನಿಗೆ ಹೇಳಿದರು: ''ನೋಡು ಮಫೇತಿ, ಶ್ರೀಮಾತೆಯವರ ಮಂದಿರಕ್ಕೆ ಎಂಥ ಸಿಡಿಲು ಬಡಿಯಿತು ಗೊತ್ತೆ? ಒಂದು ಸಲ ಆಜಾನ್ ಕೊಡು ನೋಡೋಣ.'' ಮಫೇತಿ ಚಿಕ್ಕಪ್ಪ ಮಹಾರಾಜ್ ಹೇಳಿದಂತೆ ಮಂದಿರದ ಬಳಿ ಆಜಾನ್ ಕೊಟ್ಟರು. ಕಿಶೋರಿ ಮಹಾರಾಜ್ ಶ್ರೀಮಾತೆಯವರಿಗೆ ಆತ್ಮೀಯರು. ನಿಜ! ಶ್ರೀಮಾತೆಯವರು ನೀಡಿದ ತರಬೇತಿಯಿಂದಾಗಿ ಅವರು ಎಲ್ಲ ಧರ್ಮಕ್ಕೆ ಸೇರಿದವರಾಗಿದ್ದರು. ನಾವೆಲ್ಲ ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರನ್ನು ಪೈಗಂಬರರ ರೂಪದಲ್ಲೇ ನೋಡುತ್ತೇವೆ. ಹಮೇದಿ ಚಿಕ್ಕಪ್ಪ ಹಾಗೂ ಮಫೇತಿ ಚಿಕ್ಕಪ್ಪ ಅವರನ್ನೂ ಕಂಡಿದ್ದೇನೆ, ಅವರೂ ಕೂಡ ಶ್ರೀಮಾತೆ ಹಾಗೂ ಠಾಕೂರರನ್ನು ಹಾಗೆಯೇ ಭಾವಿಸುತ್ತಿದ್ದರು. ಅವರಂಥ ಮನುಷ್ಯರು ಮತ್ತೆ ಹುಟ್ಟಿ ಬರುವರೆ? ಅವರು ಅಲ್ಲಾಹನ ದೂತರು – ಸ್ವರ್ಗದ ಸಂದೇಶವಾಹಕರು!